ಅ) ಜಿಲ್ಲಾ ಪುನರ್ವಿಂಗಡನೆಯಾದ ಮೇಲೆ ಗದಗ್ ಜಿಲ್ಲೆಯ ಮುಂಡರಗಿ ಹಾಗೂ ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಜವಹರ್ ನವೋದಯ ವಿದ್ಯಾಲಯ ಸ್ಥಾಪಿಸಲು ಕೇಂದ್ರ ಸರ್ಕಾರ ಮಂಜೂರಾತಿ ನೀಡಿದ್ದು 1998-99ನೇ ಸಾಲಿನಿಂದ ಇವುಗಳನ್ನು ಪ್ರಾರಂಭಿಸಲಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ನವೋದಯ ಶಾಲೆಗಳನ್ನು ಪ್ರಾರಂಭಿಸಲು ಜಿಲ್ಲಾಧಿಕಾರಿಗಳಿಗೆ30 ಎಕರೆ ಜಮೀನು ಒದಗಿಸಲು ಪತ್ರ ಬರೆಯಲಾಗಿದೆ.

1) ಮೈಸೂರು 2) ದಾವಣಗೆರೆ 3) ಬಿಜಾಪುರ 4) ದಕ್ಷಿಣ ಕನ್ನಡ ಜಿಲ್ಲೆ 5) ಹಾವೇರಿ

ಇ) ಈಗಾಗಲೇ ಆಲಮಟ್ಟಿ ಡ್ಯಾಂ ಪ್ರದೇಶದಲ್ಲಿರುವ ನವೋದಯ ವಿದ್ಯಾಲಯವು ಬಾಗಲಕೋಟೆ ಜಿಲ್ಲೆಯಲ್ಲಿಯೇ ಇರುವುದರಿಂದ ಬಾದಾಮಿಯಲ್ಲಿ ಮತ್ತೊಂದು ನವೋದಯ ಶಾಲೆಯನ್ನು ಪ್ರಾರಂಭಿಸಲು.ಅವಕಾಶ ಇರುವುದಿಲ್ಲ. (ಬಾದಾಮಿ ತಾಲ್ಲೂಕು, ಬಾಗಲಕೋಟೆಯ ವ್ಯಾಪ್ತಿಯಲ್ಲಿದೆ)

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಕುರಿತು.

1556 - ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ) : ಮಾನ್ಯ ವಯಸ್ಕರ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಸಂಖ್ಯೆ ಎಷ್ಟು? ಹಾಗೂ ಈ ಮುದ್ರಣಾಲಯಗಳನ್ನು ಯಾವ ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?

ಆ) ಪ್ರತಿಯೊಂದು ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿರುವ ಖಾಯಂ, ದಿನಗೂಲಿ ಮತ್ತು ಕಾಂಟ್ರಾಕ್ಟ್ ನೌಕರರ ಸಂಖ್ಯೆ ಎಷ್ಟು?

ಇ) ಧಾರವಾಡ ಮುದ್ರಣಾಲಯದಲ್ಲಿ ಪ್ರಮುಖ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಧಾರವಾಡ ಮುದ್ರಣಾಲಯದಲ್ಲಿನ ಕೆಲವು ಪ್ರಮುಖ ಹುದ್ದೆಗಳಲ್ಲಿ ದಿನಗೂಲಿ ಮತ್ತು ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಕಮಾಡಿ ನಂತರ ಖಾಯಂ ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಉ) ಹಾಗದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು) :

ಅ) 6, (ಅನುಬಂಧ -1ರಲ್ಲಿ ವಿವರ ನೀಡಲಾಗಿದೆ)

ಆ) ಅನುಬಂಧ -2ರಲ್ಲಿ ವಿವರ ನೀಡಲಾಗಿದೆ.

ಇ) ಹೌದು, ಯೋಜನೇತರ ಹುದ್ದೆಗಳನ್ನು ತುಂಬಲು ಸರ್ಕಾರದ ಆರ್ಥಿಕ ನಿರ್ಬಂಧವಿರುವ ಕಾರಣ ಧಾರವಾಡ ಮುದ್ರಣಾಲಯದಲ್ಲಿ ಕೆಲವಾರು ಹುದ್ದೆಗಳು ಖಾಲಿ ಇರುತ್ತವೆ, ಹಾಗೂ ಹಾಲಿ ಕೆಲಸ ಮಾಡುತ್ತಿರುವ ನೌಕರರಿಂದ ಕೆಲಸ ನಿರ್ವಹಿಸಲಾಗುತ್ತಿದೆ.

ಈ) ಈ ರೀತಿಯ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅನುಬಂಧ - 1

ಕ್ರ.ಸಂ.	ಮುದ್ರಣಾಲಯ ಹೆಸರು	ಪ್ರಾರಂಭಿಸಿದ ವರ್ಷ
1)	ಸರ್ಕಾರಿ ಕೇಂದ್ರ ಮುದ್ರಣಾಲಯ ಬೆಂಗಳೂರು	1834
2)	ಸರ್ಕಾರಿ ಹೊರವಲಯ ಮುದ್ರಣಾಲಯ ಬೆಂಗಳೂರು	1984
3)	ಸರ್ಕಾರಿ ಶಾಖಾ ಮುದ್ರಣಾಲಯ, ಧಾರವಾಡ.	1962
4)	ಸರ್ಕಾರಿ ಶಾಖಾ ಮುದ್ರಣಾಲಯ, ಗುಲ್ಬರ್ಗಾ	1962
5)	ಸರ್ಕಾರಿ ಶಾಖಾ ಮುದ್ರಣಾಲಯ, ಮಡಿಕೇರಿ	1956
6)	ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ, ಮೈಸೂರು	1964

ಅನುಬಂಧ - 2

ಕ್ರಮ ಸಂಖ್ಯೆ	ಮುದ್ರಣಾಲಯದ ಹೆಸರು	ಖಾಯಂ	ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ	
			ದಿನಗೂಲಿ	ಕಾಂಟ್ರಾಕ್ಟ್
1)	ಸರ್ಕಾರಿ ಕೇಂದ್ರ ಮುದ್ರಣಾಲಯ ಬೆಂಗಳೂರು	1137	361	ಇಲ್ಲ
2)	ಸರ್ಕಾರಿ ಹೊರ ವಲಯ ಮುದ್ರಣಾಲಯ ಮೈಸೂರು ರಸ್ತೆ ಬೆಂಗಳೂರು.	291	27	ಇಲ್ಲ
3)	ಸರ್ಕಾರಿ ಶಾಖಾ ಮುದ್ರಣಾಲಯ ಧಾರವಾಡ.	114	19	ಇಲ್ಲ
4)	ಸರ್ಕಾರಿ ಶಾಖಾ ಮುದ್ರಣಾಲಯ ಗುಲ್ಬರ್ಗಾ.	114	8	ಇಲ್ಲ
5)	ಸರ್ಕಾರಿ ಶಾಖಾ ಮುದ್ರಣಾಲಯ ಮಡಿಕೇರಿ	37	-	ಇಲ್ಲ
6)	ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ ಮೈಸೂರು	447	-	ಇಲ್ಲ
	ಒಟ್ಟು	**2140**	**415**	-